# ಪುರಸಭೆ ಕುಂದಾಪುರ, ಉಡುಪಿ ಜಿಲ್ಲೆ

ದೂರವಾಣಿ ಸಂಖ್ಯೆ : 230410, 231510, 234510

ಕ್ರ.ಸಂ:ಪುಸಕುಂ/ಕಾಮಗಾರಿ/12 ನೇ ಹಣಕಾಸು/2007-08 ದಿನಾಂಕ : 01-12-2007

# ಟೆಂಡರ್ ಪ್ರಕಟಣೆ

ಈ ಮೂಲಕ ಲೋಕೋಕೋಪಯೋಗಿ ಇಲಾಖೆ, ಮತ್ತು ಈ ಪುರಸಭೆಯಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನಂದರೆ, ಕುಂದಾಪುರ ಪುರಸಭೆಗೆ ಈ ಕೆಳಗೆ ತೋರಿಸಿದ ಕಾಮಗಾರಿಯು 12ನೇ ಹಣಕಾಸು ಅನುದಾನದಲ್ಲಿ ಮಂಜೂರಾಗಿದ್ದು, ಸದರಿ ಕಾಮಗಾರಿಯನ್ನು ನಿರ್ವಹಿಸಲು ಇಚ್ಛೆಯುಳ್ಳ ಗುತ್ತಿಗೆದಾರರು ನಿರ್ದಿಷ್ಟ ನಮೂನೆಯಲ್ಲಿ ಕಾಮಗಾರಿಯ ಹೆಸರನ್ನು ಬರೆದು ಮೊಹರು ಮಾಡಿದ ದರಪಟ್ಟಿಯನ್ನು ದ್ವಿಪ್ರತಿಯಲ್ಲಿ ದಿನಾಂಕ 01-01-2008 ರಂದು ಸಾಯಂಕಾಲ 4.30 ಗಂಟೆಯೊಳಗಾಗಿ ಈ ಕೆಳಗಿನ ಷರತ್ತುಗಳಿಗೊಳಪಟ್ಟು ಈ ಕಾರ್ಯಾಲಯಕ್ಕೆ ಸಲ್ಲಿಸತಕ್ಕದ್ದು.

| ಕ್ರ. ಸಂ | ಕಾಮಗಾರಿಯ ಹೆಸರು | ಟೆಂಡರ್‌ಗೆ ಇಡಲಾದ ಹಣ | ಇ.ಎಂ.ಡಿ. ಮೊತ್ತ | ಟೆಂಡರ್ ಮಾದರಿ | ಕೆಲಸ ಪೂರ್ತಿ ಗೊಳಿಸಬೇಕಾದ ಅವಧಿ | ದರ್ಜೆ | ಟೆಂಡರ್ ಫಾರಂ ಬೆಲೆ |
|---|---|---|---|---|---|---|---|
| 1 | ಕುಂದಾಪುರ ಪುರಸಭೆ ವ್ಯಾಪ್ತಿಯಲ್ಲಿ ಭಗವಾನ್ ಬಿಲ್ಡಿಂಗ್ ರಸ್ತೆ ಜಂಕ್ಷನ್ ಬಳಿ ಹಾಗೂ ವೆಸ್ಟ್ ಬ್ಲಾಕ್ ರಸ್ತೆಯ ಶ್ರೀ ಯಜ್ಞ ನಾರಾಯಣ ಹೊಳ್ಳರವರ ಕಾಂಪೌಂಡ್‌ನಿಂದ ಶ್ರೀ ದುರ್ಗಾಂಬಾ ಸರ್ವಿಸ್ ಸ್ಟೇಷನ್‌ವರೆಗೆ ರಸ್ತೆಗೆ ಕಾಂಕ್ರೀಟೀಕರಣ ಮಾಡುವುದು. | 8,10,000.00 | 16,200.00 | ಐಟಂ ವಾರು | 1 ತಿಂಗಳು | 3ನೇ ದರ್ಜೆ & ಮೇಲ್ಪಟ್ಟು | 1,000.00 |

**ಸೂಚನೆಗಳು:-**

1. ಖಾಲಿ ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸುವ ಗುತ್ತಿಗೆದಾರರು ತಮ್ಮ ಲೈಸೆನ್ಸ್ ನೊಂದಣಿ ಸಂಖ್ಯೆ, ಅನುಭವ ಪ್ರಮಾಣ ಪತ್ರ, ವ್ಯಾಟ್ ಮತ್ತು ಇ.ಎಂ.ಡಿ. ಹಣವನ್ನು ರಾಷ್ಟ್ರೀಕೃತ ಬ್ಯಾಂಕ್‌ನ ಡಿ.ಡಿ.ಯನ್ನು ಮುಖ್ಯಾಧಿಕಾರಿ, ಪುರಸಭೆ, ಕುಂದಾಪುರ ಇವರ ಹೆಸರಿಗೆ ತೆಗೆದು ಅರ್ಜಿ ಜೊತೆಗೆ ಲಗತ್ತಿಸಿ ಫಾರಂ ಫೀಸ್ ಜೊತೆಗೆ ದಿನಾಂಕ : 30-12-2007 ರಂದು ಸಾಯಂಕಾಲ 4.30 ಗಂಟೆಯೊಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

2. ಖಾಲಿ ಟೆಂಡರ್ ಫಾರಂಗಳನ್ನು ಪಡೆಯುವ ಕೊನೆ ದಿನಾಂಕ 31-12-2007 ಸಾಯಂಕಾಲ 4.30 ಗಂಟೆಯೊಳಗಾಗಿ ಪಡೆಯತಕ್ಕದ್ದು.

3. ಭರ್ತಿಮಾಡಿದ ಟೆಂಡರ್ ಫಾರಂಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 01-01-2008 ಸಾಯಂಕಾಲ 4.30 ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು.

4. ಸ್ವೀಕರಿಸಿದ ಟೆಂಡರ್ ಫಾರಂಗಳನ್ನು ದಿನಾಂಕ : 01-01-2008 ರಂದು ಅಥವಾ ಅನುಕೂಲವಾದ ದಿನಾಂಕ ನಿಗದಿಪಡಿಸಿ ತೆರೆಯಲಾಗುವುದು.

**ಷರತ್ತುಗಳು:-**

1. ಮೇಲಿನ ಕಾಮಗಾರಿಗೆ ಯಾವುದೇ ಸಾಮಾಗ್ರಿಗಳನ್ನು ಇಲಾಖೆಯಿಂದ ಒದಗಿಸಲಾಗುವುದಿಲ್ಲ ಹಾಗೂ ಕಾಮಗಾರಿಗೆ ಉಪಯೋಗಿಸುವ ಸಾಮಗ್ರಿಗಳನ್ನು ಕಾರ್ಯಾಲಯದ ಅಭಿಯಂತರರವರಿಂದ ಪರೀಕ್ಷೆಗೊಳಪಡಿಸಿ ನಿರ್ವಹಿಸತಕ್ಕದ್ದು.

2. ಟೆಂಡರ್ ಮಂಜೂರಾತಿಯು ಸಕ್ಷಮ ಪ್ರಾಧಿಕಾರದ ಅಧಿಕಾರಕ್ಕೆ ಒಳಪಟ್ಟಿದೆ.

3. ಸರಕಾರವು ಕಾಲಕಾಲಕ್ಕೆ ನೀಡುವ ಆದೇಶಗಳಿಗನುಸಾರವಾಗಿ ಭದ್ರತಾ ಠೇವಣಿ, ರಾಜಧನ ಆದಾಯಕರ, ಮಾರಾಟಕರ ಇತ್ಯಾದಿಗಳನ್ನು ಬಿಲ್ಲುಗಳಲ್ಲಿ ಕಟಾಯಿಸಲಾಗುವುದು.

4. ಕಾಮಗಾರಿಯು ಪುರಸಭಾ ಕಿರಿಯ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಜಿಲ್ಲಾ ನಗರಾಭಿವೃದ್ಧಿ ಕೋಶ, ಉಡುಪಿ ಇವರ ಮೇಲ್ವಿಚಾರಣೆಗೆ ಒಳಪಟ್ಟಿರುತ್ತದೆ.

5. ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಅಥವಾ ವಿಗಧಿತ ಅವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸದಿದ್ದಲ್ಲಿ ಅಂತಹವರ ಗುತ್ತಿಗೆಯನ್ನು ರದ್ದುಪಡಿಸಿ, ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

6. ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಪ್ರತಿಯೊಂದು ಕಾಮಗಾರಿಗೆ ಪ್ರತ್ಯೇಕ ಮೊಹರು ಮಾಡಿದ ಲಕೋಟೆಯಲ್ಲಿ ದರಪಟ್ಟಿಯನ್ನು ಕಾಮಗಾರಿಯ ಹೆಸರನ್ನು ನಮೂದಿಸಿ ನೀಡತಕ್ಕದ್ದು.

7. ಷರತ್ತುಗಳನ್ನೊಳಗೊಂಡ ಟೆಂಡರುಗಳನ್ನು ಪರಿಗಣಿಸಲಾಗುವುದಿಲ್ಲ.

8. ಯಾವುದೇ ಕಾರಣ ನೀಡದೇ ಟೆಂಡರ್ ತಿರಸ್ಕರಿಸುವ ಹಾಗೂ ಅಂಗೀಕರಿಸುವ ಅಧಿಕಾರ ಈ ಕೆಳಗೆ ಸಹಿ ಮಾಡಿದವರಿಗಿರುತ್ತದೆ.

9. ಹೆಚ್ಚಿನ ಮಾಹಿತಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ ಕಾರ್ಯಾಲಯದ ವೇಳೆಯಲ್ಲಿ ಸಂಪರ್ಕಿಸಬಹುದು.

10. ಕಾಮಗಾರಿ ಪ್ರಾರಂಭಿಸುವ ಮೊದಲು, ಪ್ರಗತಿಯ ಪ್ರತಿ ಹಂತದಲ್ಲಿ ಮತ್ತು ಮುಕ್ತಾಯಗೊಂಡ ನಂತರ ಒಟ್ಟು ಕನಿಷ್ಟ 10 ಭಾವಚಿತ್ರ ತೆಗೆಸಿ ಸಲ್ಲಿಸಲು ಸೂಚಿಲಾಗಿದೆ.

11. ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ಮೂರನೇ ತಂಡದವತಿಯಿಂದ ಪರೀಕ್ಷಿಸಿದ ನಂತರ ಹಣ ಪಾವತಿ ಮಾಡಲಾಗುವುದು.

12. ಕಾಮಗಾರಿಯು ಪೂರ್ಣಗೊಂಡ ನಂತರ ಕನಿಷ್ಠ ಎರಡು ವರ್ಷದವರೆಗೆ ಯಾವುದೇ ದುರಸ್ತಿ ಕಂಡುಬಂದಲ್ಲಿ ಸದರಿ ಕಾಮಗಾರಿಯನ್ನು ತಾವೇ ನಿರ್ವಹಣೆ ಮಾಡತಕ್ಕದ್ದು.

ಆಡಳಿತಾಧಿಕಾರಿಯವರು